ದನಿಗೂಡಿಸಿದರು. ಕಲಬುರ್ಗಿಯವರ ಕುಟುಂಬ ಮನುಷ್ಯರನ್ನು ಹಚ್ಚಿಕೊಳ್ಳುವ ಬಗೆಯೇ ಹಾಗೆ.

ಅದು 2010. ಹಂಪಿ ಕನ್ನಡ ವಿಶ್ವವಿದ್ಯಾಲಯ ಕಲಬುರ್ಗಿ ಅವರಿಗೆ ನಾಡೋಜ ಗೌರವ ಘೋಷಿಸಿತು. ಮುಂಜಾನೆ, 'ಸರ್, ಸಾವಿರ ಸಾವಿರ ಅಭಿನಂದನಗೆಳು...' ಎಂದೆ. 'ನನ ಮುಂದ ಬಾಳ ಮಂದಿ ಹಿರಿಯರು ಇದಾರಲ್ಲ' ಎಂದು ಹಿರಿತನ ತೋರಿದರು. 'ನೀವು ಯಾವತ್ತೂ ನಾಡೋಜರೇ, ಯಾವುದೇ ಗೌರವ ಪ್ರಶಸ್ತಿಗಳು ನೀಡುವ ಸಂಸ್ಥೆಗೆ, ಪ್ರಶಸ್ತಿಗೆ ಘನತೆ ಗೌರವ ತರಬೇಕು. ಇದು ಇಲ್ಲಿ ಸತ್ಯವಾಗಿದೆ' ಎಂದೆ. ಅಂದು ಅವರು ನಾಡೋಜ ಗೌರವ ಸ್ವೀಕರಿಸಿದ ಕ್ಷಣ ನನ್ನಲ್ಲಿ ಒಂದು ಧನ್ಯತೆಯ ಭಾವ ಮೂಡಿತ್ತು. ನಾನಾಗ ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆಯಾಗಿ ಆ ಕ್ಷಣವನ್ನು ಕಣ್ತುಂಬಿಕೊಂಡಿದ್ದೆ ಎನ್ನುವ ಹೆಮ್ಮೆ ನನ್ನದು.

2015ನೇ ಇಸವಿಯ ಏಪ್ರಿಲ್ ತಿಂಗಳು. ಉತ್ತರ ಕರ್ನಾಟಕ ಲೇಖಕಿಯರ ಸಂಘದ ನಾಡಿನ ಗೌರವದ 'ಸಾಹಿತ್ಯ ಸರಸ್ವತಿ ಪ್ರಶಸ್ತಿ'ಗೆ ನಾನು ಆಯ್ಕೆಯಾದಾಗ ಕಲಬುರ್ಗಿಯವರು ಎಂದಿನಂತೆ ಫೋನ್ ಮಾಡಿ ಶುಭನುಡಿದು, 'ಧಾರವಾಡಕ್ಕೆ ಬರ್ತಾ ಇದ್ದಿ. ನಾವಡ ಬರ್ತಾನೇನು? ಮನಿ ಕಡೆ ಬನ್ನಿ. ಹಂಗೇ ಹೊಳ್ಳಿ ಹೋಗಬ್ಯಾಡಿ ಮತ್ತ'. ಅದು ಬರಿಯ ಮಾತಾಗಿರಲಿಲ್ಲ, ಅದರೊಳಗೆ ವಾತ್ಸಲ್ಯದ ಒರತೆ ತುಂಬಿತ್ತು. ಪ್ರಶಸ್ತಿ ಸ್ವೀಕರಿಸಿ ಆ ಸಂಜೆ ನಾವು (ನಾನು, ನಾವಡ ಮತ್ತು ಮೊಮ್ಮಗ ಸಂಕಲ್ಪ) ಅವರ ಮನೆ 'ಸೌಜನ್ಯ'ದ ಗೂಡಿಗೆ ಹೋದೆವು. ಗೇಟ್ ಸದ್ದು ಕೇಳಿಯೇ ಕಲಬುರ್ಗಿಯವರು ಮುಂಬಾಗಿಲು ತೆರೆದು ಹೊರಬಂದು ನಿಂತಿದ್ದರು, ಉಮಕ್ಕರ ಜೊತೆಯಲ್ಲಿ. ಮೆಟ್ಟಿಲು ಇಳಿದು ಸಂಕಲ್ಪನನ್ನು ಬಾಚಿ ಹಿಡಿದು ಜೊತೆಯಾಗಿ ಒಳ ಕರೆತಂದರು. ಉಮಕ್ಕ ಪೇಡಾ ಬಾಕ್ಸ್ ತಂದು ಹಿಡಿದಾಗ ತಾನೇ ಪೇಡಾ ಕೈಯಲ್ಲಿ ಹಿಡಿದು, 'ನೀ ಬರ್ತಿ ಅಂತಾನೆ ತರಿಸೀವಿ, ಇದೆಲ್ಲಾ ನಿನಗೇನ' ಎಂದು ಅವನ ಬಾಯಿಗಿಟ್ಟು ಸಿಹಿ ತಿನಿಸಿದರು. ಕಲಬುರಗಿ ಅಜ್ಜ ಪೇಡಾ ತಿನ್ನಿಸಿದ ಖುಷಿಯನ್ನು ಈಗಲೂ ಸಂಕಲ್ಪ ನೆನೆದು ಆಡುತ್ತಾನೆ. ನಮ್ಮ ಮಾತುಕತೆಯಲ್ಲಿ, 'ಯಾಕೆ ಸರ್ ಸರಕಾರ ನೀಡಿದ ಪೋಲಿಸ್ ಭದ್ರತೆಯನ್ನು ನೀವು ಹಿಂತಿರುಗಿಸಿದ್ದು? ಕದಡಿದ ವಾತಾವರಣದ ಕಾವು ಇನ್ನೂ ಆರಿಲ್ಲ, ಒಂದಷ್ಟು ದಿನ ಕಾಯಬಹುದಿತ್ತು ಸರ್' ಎಂದು ಆತಂಕದಲ್ಲೇ ಆಡಿದೆವು. 'ಆ ಪೊಲೀಸರು ಮುಂಜಾನೆ ರಾತ್ರಿ ನಿದ್ದೆ ಬಿಟ್ಟು ನನ್ನ ಮನೆ ಕಾಯ್ಕೊಂಡಿರೋದು ನನಗೆ ಸಂಕಟ ಅನಿಸ್ತದ, ಅದಕ್ಕ ಒಲ್ಲೆ ಅಂದೆ. ಅಷ್ಟಕ್ಕೂ ನನ್ನ ಮನೆಯಾಗ ಏನೈತಿ? ಇರೋ ಸಂಪತ್ತು ಅಂದರೆ ಪುಸ್ತಕಗಳು, ಅವನ್ನ ಗಂಟುಕಟ್ಟಿ ಹೊರಗಿಟ್ಟರೂ (ಬಾಗಿಲಿನ ಹೊರ ಮೆಟ್ಟಿಲತ್ತ ಕೈತೋರಿ) ಯಾರೂ ಮುಟ್ಟಂಗಿಲ್ಲ.' ನಗುತ್ತಲೇ ಆಡಿದಾಗ ನಾವೂ ನಕ್ಕಿದ್ದೆವು. ನಾವು ಹೊರಡುವಾಗ ತಾವೇ ಆಟೋ ತರಿಸಿ ಗೇಟ್‌ವರೆಗೂ ಬಂದು ಗೇಟಿಗೆ ಕೈಯಿಟ್ಟು ಇನ್ನೊಂದು ಕೈಯಲ್ಲಿ ಕನ್ನಡಕ ಹಿಡಿದು, 'ಆತು ಹೋಗ್ರಿ, ಕುಂತು ಬರೀರಿ, ಹಿಡಿದ ಕೆಲಸ ಲಗು ಮುಗಿಸಬೇಕ ನೋಡಾ' ಎಂದ ಹರಕೆಯ ಮಾತು ನಮ್ಮನ್ನು ಇಂದಿಗೂ ಆಗಾಗ ಎಚ್ಚರಿಸುತ್ತದೆ-'ಮತ್ತೇನ ಬರೆದಿ?' ಎಂಬ ಪ್ರಶ್ನೆಯಲ್ಲಿ.

ಕಲಬುರ್ಗಿಯವರು ಬಹಳ ಬಾರಿ ಆಡುತ್ತಿದ್ದರು, 'ಮನುಷ್ಯ ಕೊನೆ ಉಸಿರು ಇರೋತನಕ ದುಡಿಬೇಕ' ಅವರ ಈ ಧ್ಯೇಯವಾಕ್ಯ ಅವರ ದುರಂತ ಸಾವಿನ ಕೊನೆ ಕ್ಷಣದಲ್ಲೂ ಸತ್ಯವಾದುದು ಅವರ ನಿಷ್ಠೆಗೊಂದು ರೂಪಕ. ಈ ಸಾವು ನಡೆದ ನಂತರ ನಾವು ಕಲಬುರ್ಗಿಯವರ ಮನೆಗೆ ಹೋದಾಗ ಅವರ ಕೋಣೆಯ ಆ ಮೇಜಿನ ಮೇಲೆ ತೆರೆದಿಟ್ಟ ಕರಡು ತಿದ್ದಿಕೆಯ ಪುಟಗಳು ಅವರ ಸಾಕ್ಷಿಪ್ರಜ್ಞೆಗೆ ಸಾಕ್ಷಿ ನುಡಿಯುತ್ತಿದ್ದವು. ಇಷ್ಟೆಲ್ಲ ಆಡಿದ ಮೇಲೂ ನನಗೆ ಕಲಬುರ್ಗಿಯವರು ಒಂದು ಬಿಡಿಸಲಾಗದ ಒಗಟು. ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ, ಜೀವಯಾನದಲ್ಲಿ 40 ಬೃಹತ್ 'ಮಾರ್ಗ ಸಂಪುಟಗಳನ್ನು' ಪ್ರಕಟಿಸುವುದು ಸಾಧ್ಯವೇ? ಎಂಬುದೇ ನನಗೆ ದೊಡ್ಡ ಬೆರಗು! ಇಲ್ಲಿಯೇ ಕಲಬುರ್ಗಿಯವರು ಮಹಾಮಾರ್ಗಿಯಾಗುವುದು. 'ಮಹಾಮಾರ್ಗಿ ಕಲಬುರ್ಗಿ' ಎಂಬ ಈ ಅದ್ಭುತ ಶಿಲ್ಪವನ್ನು ಕಡೆದ, ನಾಡಿಗೆ ಅರ್ಪಿಸಿದ ಉಮಕ್ಕ ನಿಜಕ್ಕೂ ಮಹಾಶಿಲ್ಪಿ. ಹಾಗಾಗಿಯೇ ನಾನು ಬಹಳ ಬಾರಿ ಅನ್ನುವುದು ಹೆಣ್ಣನ್ನು ಅರಿಯದೆ ಗಂಡನ್ನು ಕಾಣಲಾಗದು; ಉಮಕ್ಕನನ್ನು ಅರಿಯದೆ ಕಲಬುರ್ಗಿಯವರನ್ನು ಕಾಣಲಾಗದು.

'ಪುರದ ಪುಣ್ಯ ಪುರುಷ ರೂಪಿಂದೆ ಪೋದ' ಪುಣ್ಯಪುರುಷ ಮಹಾಮಾರ್ಗಿಗೆ ನನ್ನ ಸ್ಮೃತಿ ಪಟಲದ ಸಾವಿರದ ನುಡಿ ನಮನವಿದು.

●